# ಗೆದ್ದಲುಗಳು ಮತ್ತು ಗೆದ್ದಲಿನ ಹುತ್ತ

ಗೆದ್ದಲು ಒಂದು ಚಿಕ್ಕದಾದ ಕೀಟ. ಅದರ ದೇಹ ಮೆತ್ತಗಿದ್ದು, ಬೂದು ಬಣ್ಣವನ್ನು ಹೋಂದಿರುತ್ತದೆ. ಇವು ಇರುವೆ ಮತ್ತು ಜೇನು ಹುಳುಗಳಂತೆ ಗುಂಪಿನಲ್ಲಿ ವಾಸಿಸುತ್ತವೆ.

ಒಂದು ಗೆದ್ದಲಿನ ಗುಂಪಿನಲ್ಲಿ ಕೆಲಸಗಾರ ಹುಳುಗಳು, ಸೈನಿಕ ಹುಳುಗಳು, ಒಂದು ರಾಜ ಮತ್ತು ಒಂದು ರಾಣಿ ಹುಳುಗಳಿರುತ್ತವೆ. ಪ್ರತಿಯೊಂದು ಬಗೆಯ ಗೆದ್ದಲಿಗೂ ಅದರದ್ದೇ ಆದ ಕೆಲಸವಿರುತ್ತದೆ.



ಕೆಲಸಗಾರ ಗೆದ್ದಲುಗಳು ಹುತ್ತವನ್ನು ಕಟ್ಟುವುದು, ಆಹಾರವನ್ನು ಹುಡುಕುವುದು ಮತ್ತು 'ಫಂಗಸ್'(Fungus) ತೋಟವನ್ನು ಬೆಳೆಸುವ ಕೆಲಸ ಮಾಡುತ್ತವೆ ಮತ್ತು ರಾಣಿ ಹಾಗೂ ಅವಳ ಮರಿ ಹುಳುಗಳನ್ನು   ನೋಡಿಕೊಳ್ಳುತ್ತವೆ.

ಸೈನಿಕ ಗೆದ್ದಲುಗಳು ಹುತ್ತವನ್ನು ಇತರ ಪ್ರಾಣಿಗಳ ದಾಳಿಯಿಂದ ರಕ್ಷಿಸುತ್ತವೆ ಮತ್ತು ಹುತ್ತ ಒಡೆದುಹೋದರೆ ಅದನ್ನು ಬೇಗ ಪುನಃ ಕಟ್ಟುವ ಕೆಲಸವನ್ನು ಮಾಡುತ್ತವೆ.



ಒಂದು ಗುಂಪಿನಲ್ಲಿ ಲಕ್ಷಗಟ್ಟಲೆ ಗೆದ್ದಲುಗಳು ಇರಬಹುದು.



ಗೆದ್ದಲು ಕಟ್ಟಿಗೆ, ಮರಮಟ್ಟುಗಳು, ಕೊಳೆಯುತ್ತಿರುವ ಸಸ್ಯ ಪದಾರ್ಥಗಳು ಹಾಗೂ ಪ್ರಾಣಿಗಳ ಸೆಗಣಿಯನ್ನೂ ಸೇರಿದಂತೆ ಹಲವಾರು ವಸ್ತುಗಳನ್ನು ಸೇವಿಸಲು ಇಷ್ಟಪಡುತ್ತವೆ.

ರಾಜ ಮತ್ತು ರಾಣಿ ಹುಳುಗಳು, ಹೊಸ ಗೆದ್ದಲಿನ ಕುಟುಂಬ ಶುರು ಮಾಡಲು ಜವಾಬ್ದಾರರು. ಇಡೀ ಗೆದ್ದಲಿನ ಗೂಡಿನಲ್ಲಿ ರಾಣಿ ಹುಳುವೊಂದೇ ಮೊಟ್ಟೆ ಇಡಬಲ್ಲದು. ರಾಣಿ ಹುಳು ಒಂದು ದಿನಕ್ಕೆ ಸುಮಾರು 30,000 ಮೊಟ್ಟೆ ಇಡಬಹುದು! ಸೈನಿಕ ಹುಳುಗಳು ಮತ್ತು ಕೆಲಸಗಾರ ಹುಳುಗಳು ಸೇರಿ ರಾಣಿಯ ಆರೈಕೆ ಮಾಡುತ್ತವೆ.



# ಗೆದ್ದಲು ಹುತ್ತದ

ಗೆದ್ದಲುಗಳು ಕೀಟ ಪ್ರಪಂಚದ ವಾಸ್ತುಶಿಲ್ಪಿ. ಅವು ಮಣ್ಣು, ನೀರು ಹಾಗೂ ಅವುಗಳ ಬಾಯಿಯಲ್ಲಿ ಉತ್ಪತ್ತಿಯಾಗುವ ಉಗುಳನ್ನು ಉಪಯೋಗಿಸಿ, ದೈತ್ಯಾಕಾರದ ಗೂಡುಗಳನ್ನು ಕಟ್ಟುತ್ತವೆ. ಅವುಗಳ ಈ ಗೂಡನ್ನು ಹುತ್ತ ಎಂದು ನಾವು ಕರೆಯುತ್ತೇವೆ. ಮಣ್ಣಿನಿಂದ ಚಿಕ್ಕದಾದ ಉಂಡೆಗಳನ್ನು ತಯಾರಿಸಿ, ಹುತ್ತವನ್ನು ಕಟ್ಟುತ್ತವೆ.





ನಾವು ನಮ್ಮ ಮನೆಗಳನ್ನು ಕಟ್ಟುವಾಗ ಹೇಗೆ ಇಟ್ಟಿಗೆಗಳನ್ನು ಒಂದರ-ಮೇಲೊಂದು ಸೇರಿಸಿ ಕಟ್ಟುತ್ತೇವೆಯೋ, ಹಾಗೆಯೇ, ಗೆದ್ದಲು ಈ ಮಣ್ಣಿನ ಉಂಡೆಗಳನ್ನು ಇಟ್ಟಿಗೆಯಂತೆ ಉಪಯೋಗಿಸಿ ಹುತ್ತವನ್ನು ಕಟ್ಟುತ್ತವೆ.

ಈ ರೀತಿ ಹುತ್ತ  ಕಟ್ಟಲು, ನಾಲ್ಕರಿಂದ ಐದು ವರ್ಷ ಆಗಬಹುದು.

**ಹುತ್ತಗಳ ಉದ್ದಳತೆ, ನೆಲದಡಿಯ ಬುಡದಿಂದ-ನೆಲದ ಮೇಲಿನ ತುದಿಯವರೆಗೆ, ಒಬ್ಬ ಬೆಳೆದು ನಿಂತ ಮನುಷ್ಯನಿಗಿಂತ ಸುಮಾರು ಐದು ಪಟ್ಟು ಎತ್ತರ ಇರಬಹುದು!**
**ನಿಮ್ಮ ಮನೆಯ ಸುತ್ತ, ನಿಮಗೆ ಕಾಣಲು ಸಿಗುವ ಹುತ್ತಗಳು ಎಷ್ಟು ಎತ್ತರ ಇರಬಹುದೆಂದು ಊಹೆ ಮಾಡಿ.**

**ಗೆದ್ದಲು ಹುತ್ತದ ಒಳಗೆ ಏನಿದೆ?**
**ಒಳಗೆ ಅವು ಏನು ಮಾಡುತ್ತವೆ?**

# ದ ಒಳಗೇನಿದೆ!



### ಉಸಿರಾಡುವ ಹುತ್ತ

ಗೆದ್ದಲು ಹುತ್ತದಲ್ಲಿ ಚಿಕ್ಕ-ಚಿಕ್ಕ ತೂತುಗಳಿರುತ್ತವೆ. ಈ ತೊತುಗಳು ಹುತ್ತದೊಳಗೆ, ಹೊರಗಿನ ಗಾಳಿಯಾಡಲು ಸಹಕರಿಸುತ್ತವೆ.

### ಮಧ್ಯದ ಸುರಂಗದ್ವಾರ

ಹುತ್ತದ ಈ ಭಾಗದಲ್ಲಿ ಸುರಂಗ ಮತ್ತು ದಾರಿಗಳ ಜಾಲ ಇರುತ್ತದೆ. ಇಲ್ಲಿ ಹುತ್ತದ ಒಳಗಿರುವ ಬೆಚ್ಚನೆಯ ಗಾಳಿ ಮೇಲಕ್ಕೆ ಏರಿ ಹೊರಗಿನ ತಾಜಾ ಗಾಳಿಯೊಡನೆ ಬೆರೆಯುತ್ತದೆ. ಈ ತಂಪಾದ ತಾಜಾ ಗಾಳಿ ಹುತ್ತದೊಳಗೆ ಚಲಿಸಿ, ಹುತ್ತ ಬಿಸಿಯಾಗುವುದನ್ನು ತಡೆಗಟ್ಟುತದೆ.

### ನೆಲದಡಿಯ ಗೂಡು

ಗೆದ್ದಲುಗಳು, ಹುತ್ತದ ನೆಲದಡಿಯ ಭಾಗದಲ್ಲಿ ಹೆಚ್ಚು ಕಾಲ ಕಳೆಯುತ್ತವೆ. ಇಲ್ಲಿ ರಾಣಿ ಹುಳುವಿಗೆ  ವಿಶೇಷವಾಗಿ ಮೀಸಲಾದ ಜಾಗವಿರುತ್ತದೆ. ಈ ಜಾಗದಲ್ಲಿ ರಾಣಿ ಹುಳುವು ಮೊಟ್ಟೆಯನ್ನು ಇಡುತ್ತದೆ. ಹುತ್ತದ ನೆಲದಡಿಯ ಭಾಗದ ಮತ್ತೊಂದು ಜಗದಲ್ಲಿ ಒಂದು ಶಿಶುವಿಹಾರ ಇರುತ್ತದೆ. ಇಲ್ಲಿ ಸೇವಕ ಹುಳುಗಳು 'ಫಂಗಸ್'(Fungus)ತೋಟ ಬೆಳೆಸಿ, ಮರಿ-ಗೆದ್ದಲು ಹುಳುಗಳ ಆರೈಕೆ ಮಾಡುತ್ತವೆ.

### ಪ್ರವೇಶದ್ವಾರ ಮತ್ತು ನಿರ್ಗಮನ

ಹುತ್ತದ ಬುಡದಲ್ಲಿ ಇರುವ ಹಲವಾರು ತೂತುಗಳನ್ನು ಗೆದ್ದಲುಗಳು, ರಾತ್ರಿಯ ತಂಪಾದ ಸಮಯದಲ್ಲಿ, ಆಹಾರ ಹುಡುಕುವ ಸಲುವಾಗಿ, ಹೊರಹೋಗಲು ಉಪಯೋಗಿಸುತ್ತವೆ.

### ನೆಲಮಾಳಿಗೆ

ಇದು ಹುತ್ತದ ಅತಿ ತಂಪಾದ ಭಾಗ. ಇದು ತೇವಾಂಶವನ್ನು ಹೀರಿಕೊಂಡು ಹುತ್ತದಲ್ಲಿ ತಂಪಾದ ಗಾಳಿಯಾಡುತ್ತಿರುವಂತೆ ಮಾಡುತ್ತದೆ.

# ಹುತ್ತಗಳನ್ನು ಹುಡುಕಿ!

ನಿಮ್ಮ ಮನೆಯ ಸುತ್ತ-ಮುತ್ತ ಓಡಾಡಿ ಹುತ್ತಗಳನ್ನು ಹುಡುಕಿ. ಅವುಗಳು ಕಂಡುಬಂದ ಜಾಗಗಳನ್ನು ಗುರುತಿಸಿಕೊಳ್ಳಿ. ನೀವು ಗಮನಿಸಿದ್ದನ್ನು ಬರೆದು ವಿವರಿಸಿ ಮತ್ತು ಚಿತ್ರ ಬಿಡಿಸಿ.





ನೀವು ಮಳೆಗಾಲದಲ್ಲಿ ರೆಕ್ಕೆಗಳನ್ನು ಹೊಂದಿರುವ ಗೆದ್ದಲನ್ನು,  ದಾರಿ ದೀಪಗಳ ಬಳಿ ಅಥವಾ ಮನೆಯ ದೀಪದ ಬಳಿ ಹಾರಾಡುವುದನ್ನು  ಗಮನಿಸಬಹುದು. ಇವು ಆಗತಾನೆ ನೆಲದೊಳಗಿನ ಗೂಡಿನಿಂದ ಹೊರ ಬಂದು, ಹೊಸ ಕುಟುಂಬವೊಂದನ್ನು ಪ್ರಾರಂಭಿಸಲು ತಯಾರಿ ಮಾಡುತಿರುವ ಗೆದ್ದಲು .

ಕೆಲವರು ಗೆದ್ದಲಿನ ಹುತ್ತಗಳನ್ನು "ಇರುವೆಯ ಗೂಡು" ಅಥವಾ "ಹಾವಿನ ಹುತ್ತ" ಎಂದೂ ಕರೆಯುತ್ತಾರೆ. ಕೆಲವೊಮ್ಮೆ ಇರುವೆಗಳು ಆಹಾರವನ್ನು ಹುಡುಕಿಕೊಂಡು ಗೆದ್ದಲಿನ ಹುತ್ತಕ್ಕೆ ಬರುತ್ತವೆ. ಕೆಲವೊಮ್ಮೆ ಗೆದ್ದಲುಗಳು ಕಟ್ಟಿ, ಉಪಯೋಗಿಸಿ, ಖಾಲಿ ಮಾಡಿದ ಹುತ್ತಗಳಲ್ಲಿ ಹಾವುಗಳು ವಿಶ್ರಾಂತಿ ಪಡೆಯಬಹುದು. ನಿವು ಗೆದ್ದಲು ಹುತ್ತದ  ಯಾವ-ಯಾವ ಹೆಸರನ್ನು ಕೇಳಿದ್ದೀರಿ?

ನೀವು ಓತಿಕ್ಯಾತ, ಬಾವಲಿ ಮತ್ತು ಕೆಲವು ಹಕ್ಕಿಗಳು ಗೆದ್ದಲುಗಳನ್ನು ಬೇಟೆಯಾಡಿ ತಿನ್ನುವುದನ್ನು ಗಮನಿಸಬಹುದು.

ನೀವು ಹುತ್ತದ ಹತ್ತಿರ ದೇವರ ಚಿತ್ರ ಅಥವಾ ಹೂವಿನ ಮಾಲೆ ಇರುವುದನ್ನು ನೋಡಿದ್ದೀರಾ? ಇದರ ಬಗ್ಗೆ ನಿಮ್ಮ ಗೆಳೆಗರು, ಶಿಕ್ಷಕರು ಅಥವಾ ಮನೆಯಲ್ಲಿರುವ ಹಿರಿಯರ ಹತ್ತಿರ ಕೇಳಿ. ಗೆದ್ದಲು ಮತ್ತು ಅವುಗಳ ಹುತ್ತಗಳ ಬಗ್ಗೆ ಇರುವ ನಂಬಿಕೆಗಳು, ಕಥೆಗಳು, ಒಗಟು, ಗಾದೆ ಮಾತು ಮತ್ತು ಇತರ ಹೇಳಿಕೆಗಳನ್ನು  ಸಂಗ್ರಹಿಸಿ.

ಮಳೆಗಾಲದಲ್ಲಿ
ಕೆಲವು  ಜನ ಗೆದ್ದಲುಗಳನ್ನು
ಹಿಡಿದು ತಿನ್ನುತಾರೆ.
ಗೆದ್ದಲು ಪ್ರೋಟೀನ್(protein)
ಎಂಬ ಪೌಷ್ಟಿಕ ದ್ರವ್ಯ
ಹೊಂದಿರುತ್ತದೆ. ನೀವು ಗೆದ್ದಲುಗಳಿಂದ
ಮಾಡಿದ ತಿಂಡಿ-ತಿನಿಸು ತಿಂದಿದ್ದೀರಾ?
ಅದನ್ನು ತಯಾರಿಸುವ ವಿಧಾನ
ಬಗ್ಗೆ ಬರೆದು, ನಿಮ್ಮ
ಗೆಳೆಯರಿಗೆ ತೋರಿಸಿ.



Nature Classrooms

nature conservation foundation

science for conservation

ಇದನ್ನು  ಮಕ್ಕಳಿಗೆ ಮತ್ತು ಜನಸಾಮಾನ್ಯರಿಗೆ ಪ್ರಕೃತಿಯ ಬಗ್ಗೆ ತಿಳುವಳಿಕೆ ಮೂಡಿಸಲು ಲಾಭೋದ್ದೇಶವಿಲ್ಲದ ಕಾರ್ಯಕ್ರಮದ ಅಂಗವಾಗಿ ಪ್ರಸ್ತುತ ಪಡಿಸಲಾಗಿದೆ.

ವಿವರಣೆ ಮತ್ತು ವಿನ್ಯಾಸ : ರವಿ ಜಂಬೇಕರ್
ಅನುವಾದ: ಅಕ್ಷಯ ಹೆಗಡೆ